◆ ನವ್ಯ, ನವೋದಯ ಸಾಹಿತ್ಯವನ್ನು ಆಪ್ತವಾಗಿ ವಿಶ್ಲೇಷಣೆ ಮಾಡ್ತೀರಿ. ಬಂಡಾಯ ಸಾಹಿತ್ಯ ಬಂದಾಗಲೆಲ್ಲ ಕಟುವಾಗಿ ಬರೀತೀರಿ ಯಾಕೆ?

ಬಂಡಾಯದ ಮೊದಲನೇ ಸಮ್ಮೇಳನಕ್ಕೆ ಹೋಗಿದ್ದೆ. ನಿರಂಜನ ಬಂದಿದ್ದರು. ದೇವನೂರ, ಡಿ.ಆರ್. ನಾಗರಾಜ್, ಸಿದ್ದಲಿಂಗಯ್ಯ ಎಲ್ಲರೂ ಇದ್ದರು. ಆಮೇಲೆ ಎರಡನೇ ಸಮ್ಮೇಳನಕ್ಕೂ ಹೋಗಿದ್ದೆ. ಬಂಡಾಯದ ಬರವಣಿಗೆಯಲ್ಲಿ ನಾನು ಸಾಹಿತ್ಯದಿಂದ ಬಯಸುವ ಯಾವ ಗುಣಗಳೂ ಇರಲಿಲ್ಲ ಅನಸುತ್ತೆ. ಬಹಳ ಒಳ್ಳೆಯ ವಿಷಯದ ಪ್ರತಿಪಾದನೆಗಾಗಿ ನೀವು ಪ್ರಬಂಧ ಬರೆದರೆ ಅರ್ಥವಾಗುತ್ತೆ; ಕರಪತ್ರ ಬರೆದರೆ ಒಪ್ಕೋತೀನಿ. ನಾನೇ 50–60 ಕರಪತ್ರಗಳನ್ನ ಬರೆದಿದೀನಿ. ಏನನ್ನಾದರೂ ಪ್ರತಿಪಾದಿಸುವುದಕ್ಕೋಸ್ಕರ ಕತೆ ಬರೆದರೆ ಒಪ್ಪಿಕೊಳ್ಳೋದು ಕಷ್ಟವಾಗುತ್ತೆ. ನೀವು ಕತೆ ಬರೆದು ಅದರಿಂದ ತತ್ವ ಹುಟ್ಟಿದರೆ, ಅದು ಪ್ರತಿಪಾದನೆಯ ಸರಿಯಾದ ರೀತಿ – ಕತೆಯಲ್ಲಿ, ಕವಿತೆಯಲ್ಲಿ, ನಾಟಕದಲ್ಲಿ. ಪ್ರತಿಪಾದನೆಗೋಸ್ಕರ ನಾಟಕ ಬರೆದರೆ, ನಿಮ್ಮ ಮನಸ್ಸಿಗೆ ಕೊಟ್ಟ ಆಕೃತಿಯನ್ನೇ ಕೃತಿಗೂ ಕೊಡ್ತೀರಿ. ಕೃತಿ ತಾನಾಗೇ ಒಂದು ಆಕೃತಿಯನ್ನು ಪಡೆಯೋದಿಲ್ಲ. ಅಲ್ಲಿಯ ಪಾತ್ರಗಳಿಗೆ ಒಂದು ಸ್ವ ಇರೋದಿಲ್ಲ. ಅದಕ್ಕೆ ನೀವು ಕೊಟ್ಟ ಸ್ವ ಇರುತ್ತೆ. ನೀವು ಆಡುವ ಚದುರಂಗದ ಕಾಯಿಗಳು ಅವು.

◆ 'ಒಡಲಾಳ'ದಲ್ಲಿ?

'ಒಡಲಾಳ'ದಲ್ಲಿ ಈ ಸಮಸ್ಯೆಯಿಲ್ಲ. ದೇವನೂರರ ಕತೆಗಳಲ್ಲೂ ಈ ಸಮಸ್ಯೆಯಿಲ್ಲ. ಆದರೆ 'ಕುಸುಮಬಾಲೆ'ಯಲ್ಲಿ ಇದೆ. ಅದು ದಲಿತರಲ್ಲದ ಓದುಗರ ಅಪೇಕ್ಷೆಗಳನ್ನು ತಣಿಸುವುದಕ್ಕೆ ಬರೆದ ಬರವಣಿಗೆ ಇರಬಹುದೇ ಅಂತ ನನಗೆ ಸಂದೇಹವಿದೆ. ನಾವು ನಮ್ಮ ಸ್ವಾತಂತ್ರ್ಯಕ್ಕೆ ಸರಿಯಾಗಿ ಅಲ್ಲ. ನಮ್ಮ ಆಯ್ಕೆಯ ಪ್ರಕಾರ ಅಲ್ಲ. ಇನ್ನೊಬ್ಬರ ಅಪೇಕ್ಷೆಯ ಮೇರೆಗೆ ನಾವಿರೋದು. ಇದನ್ನು ಸಾರ್ತ್ರೆ 'ಬ್ಯಾಡ್‌ಫೈತ್' ಅಂತ ಕರೀತಾನೆ. 'ಕುಸುಮಬಾಲೆ'ಯಲ್ಲಿ ಹಾಗೆ ಸ್ವಲ್ಪ ಕಂಟ್ರೈವ್ಡ್ ಆದ ಭಾಗಗಳಿದಾವೆ. ಅದರ ಕಾವ್ಯಾತ್ಮಕತೆ ಎಲ್ಲ ಪುಟಗಳಲ್ಲೂ ಸಹಜವಾಗಿ ಬಂದಿದೆ ಅಂತ ನನಗೆ ಅನಸೋದಿಲ್ಲ. ಈ ಸಂದೇಹಗಳನ್ನ ಬಹಳ ದೊಡ್ಡದು ಮಾಡಲ್ಲ. ಯಾಕಂದರೆ ಅದರ ಕೆಲವು ಭಾಗಗಳು ಬಹಳ ಉತ್ಕಟವಾಗಿವೆ.

◆ ಲಂಕೇಶ್ ಅವರಲ್ಲಿ ಬ್ಯಾಡ್‌ಫೈತ್ ಭಾಗಗಳಿಲ್ಲವಾ?

ಅವರು ಬರೆಯೋ ಒತ್ತಡ ಇಲ್ಲದೇ ಇದ್ದರೆ ಬರೀತಾನೇ ಇರ್ಲಿಲ್ಲ ಅಂತ ಕಾಣುತ್ತೆ. ಅನಂತಮೂರ್ತಿ ಸಾಕಷ್ಟು ಬ್ಯಾಡ್‌ಫೈತ್‌ನ ಬರಹಗಳನ್ನು ಮಾಡಿದಾರೆ. ಎದುರಿಗಿರೋರನ್ನ ಮೆಚ್ಚಿಸೋಕೆ ಮಾತಾಡ್ತಿದ್ದರು ಅಂತ ಅನೇಕ ಸಲ ಅನಿಸಿದೆ.

◆ ನಿಮಗೆ ಮಾತು ಮತ್ತು ಬರಹದಲ್ಲಿ ಭಾಷೆಯ ಪ್ರಶ್ನೆ ತಾತ್ವಿಕವಾಗಿ ಬಹಳ ಕಾಡಿದಂತಿದೆ. ಯಾಕಾಗಿ?

ನನ್ನ ಭಾಷೆಯ ಕಲ್ಪನೆ ಇರೋದು ಲಂಕೇಶರದು. ಭಾಷೆ ಸರಳವಾಗಿರಬೇಕು. ಕೇಳುವವನಿಗೆ ಅರ್ಥವಾಗಬೇಕು. ಅದು ಬಿಟ್ಟು ನಾನು ಚೆನ್ನಾಗಿ ಬರೀತೀನಿ ಅಂತ ಹೊರಟರೆ ಚೆನ್ನಾಗಿ ಬರೆಯೋಕಾಗಲ್ಲ. ಶಂಕರ ಮೊಕಾಶಿ ಪುಣೇಕರ್ ಹೇಳೋ ಒಂದು ಮಾನದಂಡ ಇದೆ. 'ನೀವು ಚೆನ್ನಾಗಿ ಬರೀತೀರಿ ಯಾವಾಗ ಅಂದರೆ, ನಿಮ್ಮ ಓದುಗ ಸುಮಾರಾಗಿ ಎಸ್ಸೆಸ್ಸೆಲ್ಸಿ ತನಕ ಓದಿದಾನೆ. ಕನ್ನಡ ಬಿಟ್ಟು ಬೇರೆ ಭಾಷೆ ಅವನಿಗೆ ಬರೋಲ್ಲ ಅಂತಿಟ್ಕೊಳ್ಳಿ. ಬಹುತೇಕ ಓದುಗರು ಅಂಥೋರೇ. ಅವರಿಗೋಸ್ಕರ ಬರೀತೀನಿ ಅಂತ ಮನಸಲ್ಲಿಟ್ಕೊಂಡು ಬರದ್ರೆ ಗದ್ಯ ತನ್ನಷ್ಟಕ್ಕೆ ತಾನೇ ಸೊಗಸಾಗುತ್ತೆ'